**ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**

**ಸಿ ಸಿ ನಂ. 739/2023**

| | | |
|---|---|---|
| ಹೆಸರು | ರಾಕೇಶ | PW –4 |
| ತಂದೆ ಹೆಸರು | ನಿಂಗಪ್ಪ | CW –6 |
| ವಯಸ್ಸು | 20 ವರ್ಷ | |
| ಉದ್ಯೋಗ | ವಿದ್ಯಾರ್ಥಿ | ದಿನಾಂಕಃ 24.10.2024 |
| ವಾಸ | ಗೆಜ್ಜಹಟ್ಟಿ ಗ್ರಾಮ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ಚಾಸಾ 1, 4, 5 ಮತ್ತು 7 ರವರ ಪರಿಚಯ ಇಲ್ಲ. ಮೃತ ಸಂದೀಪ ರವರ ಪರಿಚಯ ಇಲ್ಲ. ಚಾಸಾ 5 ರಿಂದ 7 ರವರ ಪರಿಚಯ ಇಲ್ಲ, ಮೃತ ಸಂದೀಪ ರವರ ಪರಿಚಯ ಇಲ್ಲ. ಆರೋಪಿತರನ್ನು ನಾನು ನೋಡಿಲ್ಲ. ನನಗೆ ಸದರಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ, ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಸಲು ಮಾನ್ಯ ಎ.ಪಿ.ಪಿ ಯವರು ಕೋರಿದ್ದು, ಸಂಗತಿಗಳನ್ನು ಪರೀಶಿಲಿಸಲಾಗಿ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟಿ ಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲು ಶ್ರೀ ಎ.ಪಿ.ಪಿ. ಯವರಿಂದಃ**

ದಿನಾಂಕ 07.02.2023 ರಂದು ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ಸಂದೀಪನು ನೀರು ಬಿಡಲು ವಾಲ್ ಆನ್ ಮಾಡಲು ಹೋದಾಗ ವಾಲ ಕಿಟಕಿ ಹತ್ತಿರ ಇದ್ದು, ಕಿಟಕಿಯನ್ನು ಮುಟ್ಟಿ ವಾಲ್ ಆನ್ ಮಾಡಿದಾಗ ಸಂದೀಪನಿಗೆ ವಿದ್ಯುತ್ ಶಕ್ತಿಯ ಶಾಕ್ ತಗಲಿದಾಗ ಅಲ್ಲಿಯೇ ಇದ್ದ ಪ್ಲಾಸ್ಟಿಕ್ ಪೈಪ್ ಮೂಲಕ ಸಂದೀಪನನ್ನು ಹಿಂದಕ್ಕ ಎಳೆದುಕೊಂಡೆವು ಎಂದರೆ ಸರಿಯಲ್ಲ. ನಂತರ ನಾವು ರೈಸ್ ಮಿಲ್ ವಾಹನದಲ್ಲಿ ಸಂದೀಪನು ಚಿಕಿತ್ಸೆಗಾಗಿ ದಾವಣಗೆರೆಯ ಚಿಗಟೇರಿ ಆಸ್ಪತ್ರೆಗೆ ಹೋಗಿದ್ದು, ಅಲ್ಲಿನ ವೈದ್ಯರು ಸಂದೀಪನು ಮೃತಪಟ್ಟಿರುತ್ತಾನೆ ಎಂದು ತಿಳಿಸಿದರು ಎಂದರೆ ಸರಿಯಲ್ಲ. ಸದರಿ ಅವಘಡವು ಆಕಾಶ ರೈಸ್ ಮಿಲ್ ಮಾಲೀಕರಾದ ಸುರೇಶ, ಗುಮಾಸ್ತರಾದ ಬಸಪ್ಪ ಹಾಗೂ ಗಿರೀಶ್ ರವರು ಯಾವುದೇ ಮುಂಜಾಗ್ರತಾ ಕ್ರಮ ಕೈಗೊಳ್ಳದೇ ನಿರ್ಲಕ್ಷತನ ಮತ್ತು ಬೇಜಾವಾಬ್ದಾರಿ ತೋರಿಸಿದ್ದರಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಪೊಲೀಸರ ಮುಂದೆ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ 6 ಎಂದು ಗುರುತಿಸಲಾಯಿತು. ಪ್ರಕರಣಕ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ.**

**ಮರುವಿಚಾರಣೆ ಇಲ್ಲಃ**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

Sd/-
ಸಿ/ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ, ಹರಿಹರ.